# ಹೆಚ್ಚಿನ ವರದಕ್ಷಿಣೆ ತರುವಂತೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿ ಕೊಲೆ ಮಾಡಲು ಪ್ರಯತ್ನಿಸಿದ ಆರೋಪಿತರಿಗೆ 10 ವರ್ಷಗಳ ಕಾರಾವಾಸ ಶಿಕ್ಷೆ

ಸದರಿ ಪ್ರಕರಣದ ಪಿರ್ಯಾದಿದಾರಳಾದ ಆಫ್ರಿನ್ ಕೋಂ ಮದಾರಅಲಿ ಕಾಗಿನೆಲ್ಲಿ ಇವಳು ಆರೋಪಿತರ ಪೈಕಿ ಆರೋಪಿ ನಂ: 01 ನೇದವನಾದ ಮದಾರಅಲಿ ತಂದೆ ಅಬ್ದುಲಖಾದರಜಿಲಾನಿ ಕಾಗಿನೆಲ್ಲಿ ಈತನೊಂದಿಗೆ ದಿನಾಂಕ: 28-04-2019 ರಂದು ಹರಿಹರ-ಶಿವಮೊಗ್ಗ ರಸ್ತೆಯ ಶ್ರೀಕಾಂತ ಟಾಕೀಜ ಹತ್ತಿರ ಇರುವ ಕಾಟವೆ ಭವನದಲ್ಲಿ ಶಾಸ್ತ್ರೋಕ್ತವಾಗಿ ಮದುವೆಯಾಗಿದ್ದು, ಮದುವೆ ಕಾಲಕ್ಕೆ ಪಿರ್ಯಾದಿದಾರಳ ಮನೆಯವರು ವರದಕ್ಷಿಣೆ ಅಂತಾ 02 ಲಕ್ಷ ರೂಪಾಯಿ ಹಣ, 3 ತೊಲೆ ಬಂಗಾರ, 02 ಬಂಗಾರದ ಉಂಗುರ ಮತ್ತು ಗ್ರಹ ಸಾಮಾನುಗಳನ್ನು ಕೊಟ್ಟು ಮದುವೆ ಮಾಡಿದ್ದರೂ ಸಹ ಇನ್ನುಳಿದ ಆರೋಪಿತರಾದ ಆರೋಪಿ ನಂ: 02 ದಿಲ್‌ಶಾದ ಬೇಗಂ ಕೋಂ ಅಬ್ದುಲಖಾದರ ಜಿಲಾನಿ, ಆರೋಪಿ ನಂ: 03 ಅಬ್ದುಲಖಾದರ ತಂದೆ ಮದರಸಾಬ ಜಿಲಾನಿ, ಆರೋಪಿ ನಂ: 04 ಬೀಬಿಫಾತಿಮಾ ಕೋಂ ಇರ್ಫಾನ ಶಂಸುದ್ದೀನ್ ಸವಣೂರ ಇವರು ಮದುವೆಯಾದ 01 ತಿಂಗಳು ಚೆನ್ನಾಗಿ ನೋಡಿಕೊಂಡು ನಂತರ ದಿನಾಂಕ: 28-05-2019 ರಂದು ತವರುಮನೆಯಿಂದ ಇನ್ನೂ 5 ಲಕ್ಷ ರೂಪಾಯಿ ಹೆಚ್ಚಿನ ವರದಕ್ಷಿಣೆ ತರುವಂತೆ ಪಿರ್ಯಾದಿ ಆಫ್ರಿನ್ ಕೋಂ ಮದಾರಅಲಿ ಕಾಗಿನೆಲ್ಲಿ ಇವಳಿಗೆ ಮಾನಸಿಕ ಮತ್ತು ದೈಹಿಕವಾಗಿ ಕಿರುಕುಳ ನೀಡುತ್ತಾ ಬಂದಿದ್ದಲ್ಲದೇ, ಆರೋಪಿ ನಂ: 02 ನೇದವಳು ನಿನ್ನ ಗಂಡನ ಜೊತೆಗೆ ಹೋಗಿ ಏಕೆ ಮಲಗುತ್ತಿ ನಿನ್ನ ಮಾವನ ಹತ್ತಿರ ಮಲಗು ಅಂತಾ ಅಕ್ರಮ ಲೈಂಗಿಕ ಒತ್ತಡವನ್ನು ತರುತ್ತಿದ್ದುದ್ದಲ್ಲದೇ, ಅಡುಗೆ ಮನೆಯಲ್ಲಿ ಗ್ಯಾಸ್ ಬ್ರಸ್ಟ ಆಗುವಂತೆ ಸಿಲೆಂಡರ್ ನಾಬನ್ನು ಉದ್ದೇಶಪೂರ್ವಕವಾಗಿ ಲೂಜ್ ಮಾಡಿ ಸಾಯುವಂತೆ ಮಾಡಲು ಪ್ರಯತ್ನಿಸಿದ ಅಪರಾಧಕ್ಕಾಗಿ ಕಲಂ: 468(ಎ), 307, 323, 114, 506 ರೆವಿ 34 ಭಾ.ದಂ.ಸಂ ಮತ್ತು 3 ಮತ್ತು 4 ಡಿ.ಪಿ ಕಾಯ್ದೆ ರಡಿಯಲ್ಲಿ ಅಪರಾಧ ಎಸಗಿದ ಬಗ್ಗೆ ಆರೋಪಿತರ ಮೇಲೆ ಹಾವೇರಿ ಮಹಿಳಾ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ತನಿಖಾಧಿಕಾರಿಗಳಾದ **ಶ್ರೀ ಮಂಜಣ್ಣ ಟಿ, ಪಿ.ಐ** ರವರು ಪ್ರಕರಣದ ತನಿಖೆಯನ್ನು ನಡೆಸಿ ದೋಷಾರೋಪಣಾ ಪತ್ರವನ್ನು ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ಸದರಿ ಪ್ರಕರಣದ ಆರೋಪಿತರಾದ 1) ಮದಾರಅಲಿ ತಂದೆ ಅಬ್ದುಲಖಾದರಜಿಲಾನಿ ಕಾಗಿನೆಲ್ಲಿ 2) ದಿಲ್‌ಶಾದಬೇಗಂ ಕೋಂ ಅಬ್ದುಲಖಾದರಜಿಲಾನಿ 3) ಅಬ್ದುಲಖಾದರ ತಂದೆ ಮದರಸಾಬ ಜಿಲಾನಿ ಸಾ॥ ಹಾವೇರಿ ಇವರ ಮೇಲೆ ಹೊರಿಸಲಾದ ಆಪಾದನೆಗಳಾದ **ಕಲಂ: 498(ಎ), 323, 307, 506 ಭಾ.ದಂ.ಸಂ ಮತ್ತು 3 ಮತ್ತು 4 ವರದಕ್ಷಿಣೆ ನಿಷೇಧ ಕಾಯ್ದೆ-1961** ಅಡಿಯಲ್ಲಿ ಆಪಾದನೆಗಳನ್ನು ಅಭಿಯೋಜನೆಯು ರುಜುವಾತು ಪಡಿಸಿರುತ್ತದೆ ಅಂತಾ ಹಾವೇರಿಯ 1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ **ನ್ಯಾಯಾಧೀಶರಾದ ಶ್ರೀ ಜೆ.ಎಲ್ ಲಕ್ಷ್ಮೀನಾರಾಯಣ ರವರು ಆರೋಪಿ ನಂ:01 ರಿಂದ 03 ನೇದವರಿಗೆ 10 ವರ್ಷಗಳ ಕಾರಾಗೃಹ ಶಿಕ್ಷೆ ಮತ್ತು ರೂ. 12,000/- ರೂಗಳ ದಂಡವನ್ನು ವಿಧಿಸಿ ದಿನಾಂಕ: 17-08-2023** ರಂದು ತೀರ್ಪು ನೀಡಿರುತ್ತಾರೆ.

ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ 1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರಾದ **ಶ್ರೀಮತಿ ಸರೋಜಾ ಜಿ ಕೂಡಲಗಿಮಠ** ರವರು ಪ್ರಕರಣ ನಡೆಸಿ ವಾದ ಮಂಡಿಸಿದ್ದರು.

17/8/23

ಹಾವೇರಿ
ದಿನಾಂಕಃ 17-08-2023

( ಸರೋಜಾ ಜಿ ಕೂಡಲಗಿಮಠ )
1ನೇ ಅಧಿಕ ಸರ್ಕಾರಿ ಅಭಿಯೋಜಕರು
ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾವೇರಿ.

ವರದಿಗಾರರು,

1) ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಹಾವೇರಿ, ಇವರಿಗೆ ಪ್ರಕಟಣೆಗಾಗಿಸಂಯುಕ್ತ ಕರ್ನಾಟಕ, ಪ್ರಜಾವಾಣಿ, ವಿಜಯ ಕರ್ನಾಟಕ, ವಿಜಯವಾಣಿ, ಕೌರವ, ಮೂಡಣ, ಕನ್ನಡ ಪ್ರಭ ದಿನಪತ್ರಿಕೆ ಹಾವೇರಿ ಇವರಿಗೆ ಪತ್ರಿಕೆಗಳಲ್ಲಿ ಪ್ರಕಟಿಸಲು ವಿನಂತಿಸಲಾಗಿದೆ.